Regd No B G 155

(56)

24—3—1955

ಸತ್ಯವಾದಿ

48th Year

Satyavadi

DAILY

MYSORE

ಸಂಸ್ಥಾಪಕರು — ಅಂಮನೆ ಸಿಂಸ್ಕೋದಾರ್ ಎಂ ವಿ ಸುಬ್ಬರಾಯರು ॥ ಸಂಪಾದಕರು — ಧರ್ಮಪ್ರಚಾರಸಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಸಮಾಚಾರ ಸಂಗ್ರಹ

ಪೀಕಿಂಗ್— ಜೋಸ್ಕೋದಲ್ಲಿ ಈ ತಿಂಗಳು ಯಾವ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟು ಏಜಾಂಗು ನಡೆದಿಲ್ಲವೆಂದು ಚೀನಾ ಪತ್ರಿಕೆಗಳು ಪ್ರಕಟಿಸಿವೆ.

★

ಸಿಡ್ನಿ— ಆಸ್ಟ್ರೇಲಿಯದ ಕ್ರಿಕೆಟ್ ಅಸೋಸಿಯೇಷನ್ನಿನವರು ವೆಸ್ಟ್ ಇಂಡಿಸಿಗೆ ಐದು 'ಅಂಟಿ ಬ್ಯಾಂಸರ್' ಪಾರ್ಸಲನ್ನು ಕಳುಹಿಸಿರುವರು ; ಇದರಿಂದ ಭಾಸ್ಟ್ ಬ್ಯಾಂಲಿಂಗಿನಲ್ಲಿ ಬ್ಯಾಟ್ ಮಾಡುವುದು ಸುಲಭಕರವೆಂದು ತಿಳಿಸಿದ್ದಾರೆ.

★

ಮೈಸೂರು ಸರಕಾರವು ಜಿಲ್ಲೆಗೆ ತರಲಿರುವ ರೇಸೆಟ್ಟಿಮೆಂಟು ಕಂಬಾಯಿ ಮುಸೂದೆಯನ್ನು ವಿರೋಧಿಸಿ ಒಂದು ಮನವಿಪತ್ರವನ್ನು ದ. ಕ. ಜಿಲ್ಲಾ ಕೃಷಿಕರ ಪರವಾಗಿ ಸರ್ಕಾರಕ್ಕೆ ಅರ್ಪಿಸಲಾಗಿದೆಯೆಂದು ತಿಳಿದುಬಂದಿದೆ.

★

ವಿಮಾನ ಹಿತಿಯಲು ಭಾರತಕ್ಕೆ ಸಂಬಂಧಿಸಿರುವ ಸಮುದ್ರವಿಸ್ತೀರ್ಣ 11000 ಚದರ ಮೈಲುಗಳು.

★

ಭಾರತದಲ್ಲಿ ಜನಸಾಂದ್ರತೆ ಸಂತಸದಾಯಕ ಚದರ ಮೈಲಿಗೆ 312.

★

ಭಾರತದಲ್ಲಿರುವ ಅಣ್ಯಾಗಳ ಒಟ್ಟು ವಿಸ್ತೀರ್ಣ 280159 ಚದರ ಮೈಲಿಗಳು— ಅಂದರೆ ದೇಶದ ಒಟ್ಟು ವಿಸ್ತೀರ್ಣದಲ್ಲಿ ತೇಕಡ 22-11 ರಷ್ಟು.

★

ಕಾಳಿಯ ಪಂಚಾಂಗ

ದೈವಜ್ಞ ಶಿಖಾಮಣಿ

ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ ರಾಜಶಾಸ್ತ್ರಾಚಕ್ರ, ಜ್ಯೋತಿರ್ವಿದ್ಯಾನಿಧಿ

ಸೂಪಕ್ಕೃಷ್ಣಜೋಯಿಸಂಪೊಂದ

22 ಗುರುವಾರ ಅಷ್ಟಮಿ ಮೂಲ

ಐವತ್ತೇಳು ಕಡೆ ರೇಷನಿಂಗು

ಬೆಂಗಳೂರಿನಲ್ಲಿ ಸಮಾವೇಶವಾಗಿರುವ ವಿಧಾನ ಸಭೆಯಲ್ಲಿ ಕಂದಾಯಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಮಾತನಾಡುತ್ತಾ ಎಂಡು ಘಟ್ಟಗಳಲ್ಲಿ 57 ಪಟ್ಟಣ ಹಾಗೂ ಪ್ರದೇಶಗಳಲ್ಲಿ ಅನಿಯಂತ್ರಿತ ಪಡಿತರ ಜಾರಿಗೆ ತರಲಾಗುವುದೆಂದು ತಿಳಿಸಿದರು. ಏಪ್ರಿಲಿನ ತಾ॥ 1 ರಲ್ಲಿ ಹದಿನೆಂಟು ಕಡೆ ಪಡಿತರ ಕ್ರಮ ಜಾರಿಗೆ ಬರುವುದೆಂದು ಮುಖ್ಯ ಜುಲಾಯಿ ರಿಂದ 39 ಕಡೆ ಜಾರಿಗೆ ಬರುವುದಾಗಿ ತಿಳಿಸಿದರು.

ಉಡುಪಿಯಲ್ಲಿ ಅಕ್ಕಿ ಅಭಾವವಿಲ್ಲವೆಂದು ಅವರು ತಿಳಿಸಿದರು.

★

ಕೈಗಾರಿಕೆ ಅಭಿವೃದ್ಧಿ

ಕೈಗಾರಿಕೆ ಮಂತ್ರಿ ಶ್ರೀ ಕೆ. ಮಲ್ಲಪ್ಪನವರು ವಿಧಾನ ಸಭೆಯಲ್ಲಿ ಮಾತನಾಡುತ್ತಾ, ಮೈಸೂರಿನ ಕೈಗಾರಿಕೆಯ ಪ್ರಗತಿ ಅಷ್ಟು ಆಗಿಲ್ಲವೆಂದು, ವಿದ್ಯುತ್ತಿನ ಅಭಾವವೇ ಇದಕ್ಕೆ ಕಾರಣವೆಂದೂ ಈಗ ಶರಾವತಿಯಿಂದ ವಿದ್ಯುತ್ತಿನ ಉತ್ಪಾದನೆ ಸಾಧ್ಯವಿರುವುದರಿಂದ ಕೈಗಾರಿಕೆ ಪ್ರಗತಿ ಸಾಧ್ಯವೆಂದು ತಿಳಿಸಿದರು.

ಕಾಫಿ ಟೀ ಇಲ್ಲ

ವಿಜಯವಾಡಾದಲ್ಲಿ ಹಾಲಿನ ಸಬ್ಸಿಡಿ ತಾಜ್ಯ ಬಗ್ಗೆ ಹೊಟೇಲಿನವರಿಗೂ ಹಾಲಿನವರಿಗೂ ಬೆಲೆ ಹೆಚ್ಚಿಸುವ ವಿಷಯದಲ್ಲಿ ಒಪ್ಪಂದವಾಗದೆ ಮುನ್ನೂರು ಹೋಟಲುಗಳಲ್ಲಿ ಕಾಫಿ ಟೀ ಸಂಬಂಧವನ್ನು ನಿಲ್ಲಿಸಲಾಗಿದೆ

—

ಕೇರಳದ ಈಗಿನ ಗವರ್ನರಾಗಿದ್ದ ಶ್ರೀ ವಿ ವಿ ಗಿರಿಯವರು ಮುಂದಿನ ತಿಂಗಳು 2 ರಂದು ಮೈಸೂರು ರಾಜ್ಯದ ರಾಜ್ಯದ ರಾಜ್ಯಪಾಲರಾಗಿ ಅಧಿಕಾರ ವಹಿಸುವರೆಂದು ವದಂತಿಯಾಗಿದೆ.

ಗುಂಡಿನೇಟು

ಕ.ಚ ಬಿಹಾರು ಗಡಿಯಲ್ಲಿ ನಿನ್ನೆ ಪಾಕಿಸ್ಥಾನ ಗುಂಡುಹಾರಿಸುತ್ತಿದ್ದಿತು.

★

ಸಿಂಹಳದಲ್ಲಿ

ಸಿಂಹಳ ಚುನಾವಣೆಯಲ್ಲಿ 124 ಸ್ಥಾನಗಳಲ್ಲಿ ಡಿಡ್ಲಿ ಸೇನಾನಾಯಿಕೆಯವರ ಯುನೈಟೆಡ್ ನ್ಯಾಷನಲಿಸ್ಟ ಪಾರ್ಟಿಗೆ 54 ಸ್ಥಾನಗಳೂ, ಶ್ರೀಮತಿ ಬಂಡಾರನಾಯಿಕೆಯವರ ಲಂಕಾ ಫ್ರೀಡಂ ಪಾರ್ಟಿಗೆ 32 ಸ್ಥಾನಗಳೂ ದೊರಕಿವೆ.

★

ಅನ್ನ ಸತ್ಯಾಗ್ರಹ

ಉಡುಪಿಯಲ್ಲಿ ಜಿಲ್ಲಾಧಿಕಾರಿಗಳು ರೇಷನಿಂಗನ್ನು ಜಾರಿಗೆ ತರುವಕಾಲಕ್ಕೆ ವಿರುದ್ಧವಾಗಿ ಸಭಾಸದಸ್ಯರು ಅನ್ನಸತ್ಯಾಗ್ರಹ ನಡೆಸುತ್ತಿದ್ದಾರೆ : ಇದಕ್ಕೆ ಎಲ್ಲ ಪಕ್ಷಗಳ ಬೆಂಬಲವಿದೆ.

★

ಲೋಕಸಭೆಲಿ

ನವದೆಹಲಿ— ಜೀಪಾ ಮುಖ್ಯ, ಇತರ ಕಡೆಗಳಿಂದ ಭಾರತದ ವಿರುದ್ಧದ ಸಾಹಿತ್ಯಗಳು ವಿವಿಧ ನ್ಯಾಯಬಾಹಿರ ರೀತಿಯಿಂದ ಕಳಹಿದರಾಗುತ್ತಿರುವುದು ಗೊತ್ತಿಂದ ಈ ಸಭೆಯಲ್ಲಿ ತಿಳಿಸಲಾಯಿತು : ಇದನ್ನು ಅಗಾಗ್ಗೆ ಜಾಗರೂಕತೆಯಿಂದ ನೋಡಿಕೊಳ್ಳಲಾಗುತ್ತಿದೆ ಎಂದೂ ತಿಳಿಸಲಾಯಿತು.

★

ಜಲಸಮಾಧಿ

ಹೊಸಪೇಟೆ — ತಳವಾಪ್ಪಟ್ಟದ ಹತ್ತಿರ ತುಂಗಭದ್ರಾ ನದಿಯನ್ನು ದಾಟುತ್ತಿದ್ದ ದೋಣಿ ನಿನ್ನೆ ಬೆಳಗ್ಗೆ 9 ಗಂಟೆಗೆ ಜಲಸಮಾಧಿಕರವಾಯಿತು.

ವಾರ್ತಾ ವಿಶೇಷಗಳು

ನವದೆಹಲಿ— ಭಾಷಾ ಸಮಸ್ಯೆ ಪುನರ್ ಹಾಗಿಂದ ಬಗ್ಗೆ ಸೇರಿದ್ದ ವಿವಿಧ ಪಕ್ಷಗಳ ನಾಯಕರ ಸಭೆಯಲ್ಲಿ, ರಾಜ್ಯಾಂಗ ತಿದ್ದುಪಡಿ ಮಾಡುವುದಿಲ್ಲವೆಂದೂ, ಅಧಿಕೃತ ಭಾಷಾ ಶಾಸನದಲ್ಲಿ ನೆಹರೂರವರು ಹಿಂದಿ ಮಾತನಾಡದ ಭಾಗಗಳಿಗೆ ಕೊಟ್ಟಿದ್ದ ಭರವಸೆಯನ್ನು ಸೇರಿಸಿ ತಿದ್ದುಪಡಿ ಮಾಡಲು ಪರ್ಯಾಲೋಚಿಸಲಾಗುತ್ತಿದೆ ಎಂದೂ ಪ್ರಧಾನಿ ಶಾಸ್ತ್ರಿಗಳು ತಿಳಿಸಿದರು.

ನವದೆಹಲಿ— ಸ್ವತಂತ್ರ ಪಕ್ಷದ ನಾಯಕ ಶ್ರೀ ಮಸಾನಿಯವರು ಬಡ್ಜೆಟ್ ವಿಷಯದಲ್ಲಿ ಲೋಕಸಭೆಯಲ್ಲಿ ಮಾತನಾಡುತ್ತಾ— ಇದು ಹಣದುಬ್ಬರದ ಮತ್ತು ಅಭಿವೃದ್ಧಿವಿರುದ್ಧದ್ದಾಗಿದೆ ಎಂದು ಹೇಳಿದರು : ಮುಂದಿನ 12 ತಿಂಗಳಲ್ಲಿ ಮತ್ತೂ ಬೆಲೆ ಏರುವುದೆಂದ, ಇದು ಬೆಲೆಯೇರಿಸುವ ಬಡ್ಜೆಟ್ ಎಂದೂ ಹೇಳಿದರು.

ನವದೆಹಲಿ— ರಿಪಬ್ಲಿಕನ್ ಅಜ್ಜಿಯು ತನ್ನ ಮೇಲಿದ್ದುದನ್ನು ತಿಳಿದು ಕಾಣಿಸಿಕೊಳ್ಳಬೇಕೆ ಮನೆಯಲ್ಲೇ ಇದ್ದ ವಾಪು ಕಮ್ಯೂನಿಸ್ಟು ಪಾರ್ಟಿಮೆಂಟು ಸದಸ್ಯ ಇಂಬಿಚ್ಚಿಬಾವರು ಲೋಕದ ತನ್ನ ಗಾತ್ರದಿಂದ ನವದೆಹಲಿ ಪಾರ್ಲಿಮೆಂಟಿಗೆ ಬಂದು, ತನ್ನ ಸಂಬಳ ಮತ್ತು ಅಲೋಯನ್ಸನ್ನು ಪಡೆದುಕೊಂಡು ಹೊರಟುಹೋದನೆಂದು ವಂದಿಸಲಾಗಿದೆ.

ಬೆಂಗಳೂರು— ರಾಜ್ಯಾದ್ಯಂತ ಆಹಾರ ಬೆಂಕೆ ಹುಟ್ಟು ಹೋಟಲಿನಲ್ಲಿ ತುಟಿಶ್ವನ್ನು ತನಿಖೆ ಮಾಡಲು ಶಾಸನ ಕ್ಯಾ ಕಾಶ್ಯ ವಿಶೇಷ ತಂಡವನ್ನು ವಿಸರ್ಜಿಸಲು ಸರ್ಕಾರಲೋಜನೆಯಲ್ಲಿದೆಯೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ— ಈ ದೇಶಕ್ಕೆ ಪಾಕಿಸ್ಥಾನದಿಂದ ನಿರಾಶ್ರಿತರು ಬರುವುದನ್ನು ತಪ್ಪಿಸಲು, ಭಾರತ-ಪೂರ್ವ ಪಾಕಿಸ್ಥಾನ ಗಡಿಯನ್ನು ಸರಕಾರ ಮುಚ್ಚಲು ನಿರ್ಧರಿಸಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಮನು ಸಂಹಿತೆಯನ್ನು ಯಾರು ಅಗೌರವಿಸಿದ್ದರು ? ಮತ್ತು ಏಕೆ ?

*]

(ಮುಂದುವರಿದುದು).

ಆದುದರಿಂದ ಸ್ವಾಭಾವಿಕವಾಗಿ ಅಧಿಕಾರದಲ್ಲಿರುವವರು ದುರಾಚಾರವನ್ನೇ ಅಪೇಕ್ಷಿಸುವವರಾದರೆ, ಹಿಂದುಗಳಿಗೆ ಶಾಸನಕರ್ತನಾದ ಮನುವಿನಿಂದ ನಿಷೇಧಿಸಲ್ಪಟ್ಟಿರುವುದನ್ನು ಕಾನೂನುಬದ್ಧವಾಗಿ ಮಾಡುತ್ತಾರೆ ; ಅವರಿಗೆ ತೋರಿದಂತೆ ನೈತಿಕತೆಯ ಬಗ್ಗೆ ವಿಧಿಸುವ ಹೊಸ ಶಾಸನವನ್ನು ಏನೂ ಪ್ರಯೋಜನವಿಲ್ಲವೆಂದು ಹೇಳುತ್ತಾರೆ ಒಂದು ದೇಶದ ಪಾರ್ಲಿಮೆಂಟು ಯಾವ ಕಸ್ತೂರಿ ಮಾಡಬಾರದೆಂದು ಭಾವಿಸಿದಲ್ಲಿ ಅದು ಬುದ್ಧಿಹೀನತೆಯು ವಿಡಂಬನವಾಗಿರುತ್ತದೆ : ಏಕೆಂದರೆ ಕೆಲವು ಶತಮಾನಗಳ ಹಿಂದೆ ಇಂಗ್ಲೆಂಡಿನಲ್ಲಿದ್ದ ಪಾರ್ಲಿಮೆಂಟನ್ನು ಅದ್ಭುತಪ್ರದರ್ಶನವನ್ನಾಡಿದ ಕೆಲವರಿಂದ ಪ್ರಚೋದಿತವಾದ ಪಾರ್ಲಿಮೆಂಟು ಎಂದು ಕರೆದಿದ್ದಾರೆ.

ಈ ರೀತಿಯಾಗಿ ಒಂದು ದೇಶವು ಹಿಂದೆ ತಿಳಿಸಿದಂತೆ ಪದೇ ಪದೇ ನೈತಿಕತೆಯನ್ನು ಹಾಳುಮಾಡಲು ಕಾನೂನನ್ನು ರಚಿಸುತ್ತಿದ್ದರೆ, ಜಾಗ್ರತೆಯಾಗಿ ಬದುಕುವ ಬೆನ್ನೆಲುಬು ಮುರಿಯುತ್ತದೆ, ಮತ್ತು ಅದರಿಂದ ರಾಷ್ಟ್ರವು ಅತಿ ಜಾಗ್ರತೆಯಾಗಿ ನಾಶಹೊಂದುತ್ತದೆ ಎಂಬುದನ್ನು ದೂರದರ್ಶಿತ್ವವುಳ್ಳ ಪುರುಷನಾದರೂ ತಿಳಿಯಬಹುದಾಗಿರುತ್ತೆ. ಹಿಂದುಗಳ ಪವಿತ್ರ ಗ್ರಂಥಗಳನ್ನು ಅವಹೇಳನ ಮಾಡುವುದು ಮತ್ತು ನಷ್ಟತೆಯುಳ್ಳಿಯೂ ಅದನ್ನು ತಿರಸ್ಕರಿಸುತ್ತಿರುವುದು ಮುಂತಾದವುಗಳಿಂದ ಹಿಂದೆ ತಿಳಿಸಿರುವ ವಿಚಾರದ ಸತ್ಯತೆಯನ್ನು ತಿಳಿಯಬಹುದಾಗಿರುತ್ತೆ. ಆ ವಿಚಾರದಲ್ಲಿ ಕೆಲವು ಉದಾಹರಣೆಗಳನ್ನು ನೋಡೋಣ.

೧) ಒಬ್ಬ ದ್ವಿಜನು ಲೋಭದಿಂದ ಕೋಳಿಯನ್ನು ತಿಂದರೆ, ಮನು ಸಂಹಿತೆಪ್ರಕಾರ ಅವನನ್ನು ಜಾತಿಭ್ರಷ್ಟನೆಂದು ತಿಳಿಯಬೇಕು : ಅಥವಾ ಅವನು ಪಾಯಶ್ಚಿತ್ತ ಮಾಡಿಕೊಳ್ಳಬೇಕು (ಮನುಸಂಹಿತ 5 / 14) : ಆದರೆ ದೌರ್ಭಾಗ್ಯದಿಂದ ಅನೇಕ ಪಾರ್ಲಿಮೆಂಟು ಸದಸ್ಯರು ಮತ್ತು ಮುಂದಾಳುಗಳೆನಿಸಿಕೊಳ್ಳುವವರು ಕೋಳಿಯನ್ನು ತಿನ್ನುವ ಅಭ್ಯಾಸವುಳ್ಳವರಾಗಿರುತ್ತಾರೆ, ಮತ್ತು ಅದಕ್ಕೆ ಲೋಷವನ್ನು ಬಿಡದವರಾಗಿರುತ್ತಾರೆ.

೨) ಯಾವನಾದರೂ ಒಬ್ಬನು ಒಬ್ಬ ಪುರುಷನನ್ನಾಗಲೀ, ಸ್ತ್ರೀಯನ್ನಾಗಲೀ ದುರುದ್ದೇಶಕ್ಕಾಗಿ ಅಪಹರಿಸಿದರೆ, ಅಥವಾ ಅಭರಣಗಳನ್ನು ಕದ್ದರೆ ಮನುವಿನ ಅಭಿಪ್ರಾಯದಂತೆ ಅವನಿಗೆ ಮರಣದಂಡನೆಯನ್ನು ವಿಧಿಸಬೇಕು (ಮನುಸಂಹಿತ 8 / 323) : ಆದರೆ ಅಯ್ಯೋ ! ಈ ಕಾಲದಲ್ಲಿ ಎಷ್ಟೊಂದು ಜನ ಸರ್ವಥಾವಾಗಿ ಈ ಅಪರಾಧಗಳನ್ನು ಮಾಡುತ್ತಿದ್ದಾರೆ.

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಪ್ರೊ|| ಶಮೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ, ಎಂ ಎ, ಎಫ್ ಆರ್ ಎಸ್ ರವರ ಲೇಖನದಿಂದ ಸಂಗ್ರಹಿಸಿದ್ದು

ಆ. ಸ. ಅಯ್ಯಂಗಾರ್



ಗೋರಕ್ಷಣ ಪತ್ರಿಕೆಯ ಕಾರ್ಯಾಲಯ ಹೆಚ್ಚಿಗಾಗಿ ನಡೆಯುತ್ತಿರುವ

ಪುಡ್‌ಲಾಂಡ್ ಜನಪ್ರಿಯತೆ 2 ನೇ ವಾರ

ಬಿಡುಲ್ ರಾಮು'ರವರು — ಮನಮೋಹಕ ಹಿಂದಿ ಚಿತ್ರ

ಬೆನಜ್ಜೀರ್ BENAZIR

ನಾಕ್ಯ- ಅಶೋಕಕುಮಾರ್, ವೀಣಾತಾಕ್ಷಮ್ಮಾ, ಶಶಿಕಪೂರ್, ನಿರೂಪಂಜೈ ಕನ ಚಿ

ಪ್ರತಿದಿನ 3 ಪ್ರದರ್ಶನಗಳು

ಅಪೆರಾ — ಜಯಪ್ರದ 3 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅಮೋಘವಾಂತಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI SUDHA

A Superb Tonic

Help The Gorakshana

"ಗೋರಕ್ಷಣ" ಕ್ಕೆ ಜೀವಂತಿಗೆಯಾಗಿರಿ

ಶ್ರೀ ಜಗದ್ಗುರು ಮಹಾಸ್ವಾಮಿಗಳವರ್ಷಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾನುಸಾರ ಅಹಿಂಸಾ ಧರ್ಮಪ್ರಚಾರಕ್ಕಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂರಕ್ಷಣೆ, ಶಾಕಾಹಾರ, ಮದ್ಯನಿಷೇಧ ವಿಚಾರಗಳಿಂದ ತುಂಬಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 5೦ ಪೈಸೆ ; "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಮಂಡಿಸಾವುದರ್ಶಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited; Printed & Published by the Proprietor
Dharma Prachara Nirata M S Krishna Rao
At: Vidyavardhaka Press Chamarajapuram Mysore 4